ಒಂದು ಕ್ಷಣ ಅಲ್ಲಿದ್ದವರೆಲ್ಲೆಡೆ ತಿರುಗಿ ನೋಡಿದ. ವಿಶಾಲಾಕ್ಷಮ್ಮ ಯಾವ ಭಾವನೆ ಇಲ್ಲದೆಯೇ ನಿಂತಿದ್ದಳು. ರಜನಿ ಆ ಎರಡೂ ಕೂಗುಗಳೂ ಗಂಡಸದ್ದೇ ಎಂದು ತಿಳಿದು ಸ್ವಲ್ಪ ನಿರಾಳಳಾದಂತಿದ್ದಳು. ಮಿಕ್ಕವರ ಮುಖದಲ್ಲಿ ಆತಂಕ ಹೆಚ್ಚಾಗಿತ್ತು.

"ಅರ್ಧ ಕೇಸ್ ಇಲ್ಲೇ ಸಾಲ್ವ್ ಆಯಿತು" ಎಂದು ನಾಗರಾಜಯ್ಯ ಗೆಲುವಿನ ಧ್ವನಿಯಲ್ಲಿ ಅಂದ.

"ಈ ಎರಡು ಕೂಗಿನಲ್ಲಿ ಒಂದು ವಿಶ್ವನಾಥ ಅವರದ್ದೇ ಇರಬೇಕು. ಹಾಗಾದರೆ ಆ ಎರಡನೇ ಕೂಗು ಯಾರದ್ದು? ಈ ಎರಡನೇ ಕೂಗಿನ ಮರ್ಮ ಭೇದಿಸಿದರೆ ಈ ಪ್ರಕರಣ ಇತ್ಯರ್ಥ ಆದ ಹಾಗೆಯೇ. ಹಾ! ಅದು ಗಂಡಸಿನದ್ದೇ ಎಂದು ಹೇಳಿದ್ದಾನೆ. ಹಾಗಾಗಿ ಕೊಲೆ ಮಾಡಿದವರೂ ಗಂಡಸರೇ ಇರಬೇಕಲ್ಲವಾ?" ಎಂದು ಮತ್ತೆ ಮಾತು ಜೋಡಿಸಿದ.

"ತಾನು ಹಾಲು ಹಾಕಿಸಿಕೊಳ್ಳುವ ನೆಪ ಮಾಡಿ ಹೊರಬಂದು ಇನ್ನೊಬ್ಬರಿಂದ ಕೊಲೆ ಮಾಡಿಸಿದ್ದಾಳೆ ವಂಚಕಿ" ಎಂದು ರಜನಿ ಕೂಗಿದಳು.

"ಆಸ್ತಿ ವಿಶಾಲಾಕ್ಷಮ್ಮನಿಗೆ ಬರೆದಿದ್ದಾರೆ ಎಂದು ಅವರನ್ನೇ ಈ ಕೇಸ್‌ನಲ್ಲಿ ಸಿಕ್ಕಿಸಿ ಇಡೀ ಆಸ್ತಿಗೆ ನೀವೇ ವಾರಸುದಾರರೆಂದು ಘೋಷಿಸಿಕೊಳ್ಳಬಹುದು ಅಂತ ನೀವೇ ಯಾಕೆ ಮಾಡಿಸಿರಬಾರದು ರಜನಿ ಮೇಡಂ" ಸುನೀಲ್ ಸ್ವಲ್ಪ ಖಾರವಾಗಿಯೇ ಅಂದ.

"ಮುಚ್ಚು ಬಾಯಿ... ನೀನು ಯಾರು ಅಂತಾನೇ ನನಗೆ ಗೊತ್ತಿಲ್ಲ. ನಿನ್ನೆ ಬಂದು ಇಲ್ಲಿ ದೊಡ್ಡ ಮನುಷ್ಯನ ಥರ ಮಾತಾಡಬೇಡ" ಅಲ್ಲಿದ್ದ ಇನ್ನೊಬ್ಬ ಸಂಬಂಧಿಕ ನುಡಿದ.

"ನೋಡಿ, ಇಲ್ಲಿ ಇನ್ನೂ ತನಿಖೆ ಮುಗಿದಿಲ್ಲ ಹಾಗೂ ಇಲ್ಲಿ ಅಪರಾಧಿ ಯಾರೆಂಬುದನ್ನು ನಿರ್ಧಾರ ಮಾಡೋದು ಕೋರ್ಟ್. ಅದಕ್ಕೆ ಪೂರಕ ಸಾಕ್ಷಿ ಕೊಡೋದು ನಾವು. ಹಾಗಾಗಿ ನೀವೆಲ್ಲ ಸುಮ್ಮನಿರಿ" ನಾಗರಾಜಯ್ಯ ಗದರಿದ.

"ಇಲ್ಲಿ ಮೊದಲು ಅನುಮಾನ ವಿಶಾಲಾಕ್ಷಮ್ಮ ಹಾಗೂ ರಜನಿ ಮೇಲೆ ಬಂದಿತ್ತು. ಆ ಎರಡು ಕೂಗುಗಳಲ್ಲಿ ಒಂದು ಕೊಲೆಗಾರನದು ಎಂದುಕೊಂಡರೆ ಮತ್ತೆ ಒಬ್ಬ ಗಂಡಸಿನ ಮೇಲೆ ಅನುಮಾನ ಪಡಬೇಕಾಗುತ್ತದೆ. ಅದು ಯಾರು? ನಿಮ್ಮಲ್ಲಿಯೇ ಯಾರಾದರೊಬ್ಬರು ಇರಬೇಕು. ನಿಜ ಹೇಳಿ, ಇಲ್ಲಾಂದ್ರೆ ತನಿಖೆ ಮುಂದುವರೆಯುತ್ತದೆ. ಅಲ್ಲಿಯವರೆಗೂ ಯಾರೂ ಈ ಊರಿನಿಂದ ಕದಲುವಂತಿಲ್ಲ ಅಥವಾ ಅನುಮಾನದ ಮೇಲೆ ಎಲ್ಲರನ್ನೂ ಅರೆಸ್ಟ್ ಕೂಡಾ ಮಾಡಬಹುದು. ನಾನು ಏನಂತೀರಾ ಲಾಯರ್ ಸಾಹೇಬರೆ?''

ಲಾಯರ್ ನಾಗಭೂಷಣ ತಡಬಡಿಸುತ್ತಾ ಅಂದ: "ಸಾಧ್ಯ ಇದೆ. ಆದರೆ ಹಾಗೆ ನೀವು ಮಾಡಲಾಗದು. ಯಾಕೆಂದರೆ ಅದು ಕಾನೂನಿಗೆ ವಿರುದ್ಧ ಎಂದು ಸಾಬೀತುಪಡಿಸಬಹುದು."

"ಅದೂ ಸರಿ ಎನ್ನಿ. ಈ ಮನೆಯ ಲಾಯರ್ ನೀವು ಅವರ ಪರ ಮಾತಾಡಲೇಬೇಕು ನೋಡಿ. ಹಾಗೆ ನೋಡಿದರೆ ನಿಮ್ಮ ಮೇಲೂ ಒಂದು ಸಣ್ಣ ಅನುಮಾನ ಕಾಡುತ್ತಿದೆ. ನೀವು ಜಾಗಿಂಗ್ ಮಾಡುತ್ತಿದ್ದಾಗ ಈ ಸುದ್ದಿ ಕೇಳಿದಿರಿ, ಸುದ್ದಿ ಕೇಳಿ ಡೈರೆಕ್ಟ್ ಆಗಿ ಇಲ್ಲಿಯೇ ಬಂದೆ ಎಂದಿರಿ. ಆದರೆ ತಾವಿಲ್ಲಿ ಬಂದಾಗ ಮೈಮೇಲಿನ ಬಟ್ಟೆಗಳು ಹಸಿಯಾಗಿದ್ದವು. ಆದರೆ ತಮ್ಮ ಮೈಯಲ್ಲಿ ಬೆವರ ವಾಸನೆ ಇರಲಿಲ್ಲ. ನೀವು ಬಂದಾಗ ಫ್ರೆಶ್ ಆಗಿಯೇ ಇದ್ರಿ..."

ನಾಗರಾಜಯ್ಯನ ಮಾತು ಎಲ್ಲರಿಗೂ ಗುಂಡು ಹೊಡೆದಂತಾಯಿತು.

ಲಾಯರ್ ಸಾವರಿಸಿಕೊಳ್ಳುತ್ತಾ ಸಣ್ಣಗೆ ''ಇಲ್ಲಿಗೆ ಬರಬೇಕು ಎಂದು ಸ್ವಲ್ಪ ಫ್ರೆಶ್ ಆಗಿದ್ದೆ'' ಎಂದ. ಅವರ ಮಾತಿನಲ್ಲಿ ಸುಳ್ಳು ಎದ್ದು ಕಾಣಿಸುತ್ತಿತ್ತು

"ನಿಮ್ಮನ್ನು ಬಂದಾಗಿನಿಂದ ನೋಡುತ್ತಿದ್ದೇನೆ. ನಿಮ್ಮ ನೋಟ ಹಾವ ಭಾವ ಇಲ್ಲಿರುವ ಎಲ್ಲರೂ